ಎಮ್ ವಿ . ಸಿ ನಂ.285/2024

ಪಿ.ಡಬ್ಲ್ಯೂ-1

ದಿನಾಂಕಃ 18-08-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎ .ಎನ್ ಟಿ ವಕೀಲರಿಂದಃ**

1. ನನ್ನ ಊರು ಬಾಳೆಗುಳಿ ಯಾಗಿರುತ್ತದೆ . ನನ್ನ ಮನೆಯಲ್ಲಿ ನನ್ನ ತಾಯಿ ಮತ್ತು ನಾನು ಇರುತ್ತೇನೆ . ನನಗೆ ಅಣ್ಣ ಇರುತ್ತಾನೆ ನನ್ನ ತಂಗಿಗೆ ಮದುವೆ ಮಾಡಿಕೊಟ್ಟಿರುತ್ತಾರೆ. ನಾನು ಮಾರುಕಟ್ಟೆಯಲ್ಲಿ ಕೂಲಿ ಕೆಲಸ ಮಾಡುತ್ತೇನೆ . ನನಗೆ ದಿನಕ್ಕೆ ರೂ 800 ಕ್ಕಿಂತ ಜಾಸ್ತಿ ಕೂಲಿ ಬರುತ್ತದೆ . ಬಾಳೆಗುಳಿಯಿಂದ ಅಂದರೆ ನಮ್ಮ ಮನೆ ಬಾಳೆಗುಳಿಯಿಂದ ಅಂಕೋಲಾ ಕಡೆಗೆ ಹತ್ತಿರದಲ್ಲಿ ಇರುತ್ತದೆ . ಅಪಘಾತವಾಯಿತು ಎಂಬ ಸ್ಥಳವು ನಮ್ಮ ಮನೆಯಿಂದ ಒಂದುವರೆ ಕಿ.ಮೀ ದೂರ ಇರುತ್ತದೆ . ನಿಮ್ಮ ಮನೆಯಿಂದ ಅಂಕೋಲಾವು ಒಂದುವರೆ ಕಿ.ಮೀ ದೂರ ಇರುವುದರಿಂದ ನೀವು ಟೆಂಪೊದಲ್ಲಿ ಅಂಕೋಲಾ ಗೆ ಬಂದು ಟೆಂಪೊ ದಲ್ಲಿ ಮನೆಗೆ ವಾಪಸ್ಸು ಹೋಗುತ್ತೀರಿ ಎಂದರೆ ನಾನು ನಡೆದುಕೊಂಡು ಹೋಗಿ ನಡೆದು ಕೊಂಡು ಬರುತ್ತೇನೆ . ಕೂಲಿ ಕೆಲಸಕ್ಕೂ ಸಹ ಒಬ್ಬನೆ ಹೋಗುತ್ತೇನೆ .ನನ್ನ ಅಣ್ಣ ವಸಂತ ಟ್ರಕ್ ಚಾಲಕ ಇರುತ್ತಾರೆ . ನನ್ನ ಅಣ್ಣ ಟ್ರಕ ಡ್ರೈವಿಂಗ ಕೆಲಸಕ್ಕೆ ಹೋಗುವುದಿಲ್ಲ. ಆತನಿಗೆ ನಡೆಯಲು ಆಗುವುದಿಲ್ಲ . ಶಸ್ತ್ರ ಚಿಕಿತ್ಸೆ ಆಗಿರುತ್ತದೆ . ಆತನಿಗೆ 2-3 ವರ್ಷ ಗಳ ಹಿಂದೆ ಶಸ್ತ್ರ ಚಿಕಿತ್ಸೆ ಆಗಿರಬಹುದು . ಆತನಿಗೆ ಶಸ್ತ್ರ ಚಿಕಿತ್ಸೆ ಆಗಿರುವುದರಿಂದ ಕೆಲಸ ಮಾಡಲು ಆಗುವುದಿಲ್ಲ ಎಂದರೆ ಸರಿ .

2. ನಾನು ಅಪಘಾತ ಆಯಿತು ಎಂದ ದಿನ ಸಂಜೆ ಕೆಲಸ ಮುಗಿಸಿಕೊಂಡು ಏಳ ರಿಂದ ಏಳುವರೆ ಅವಧಿಯಲ್ಲಿ ಮನೆಗೆ ಹೋಗುತ್ತಿದ್ದೆ . ನಾನು ಆ ದಿನ ಅಂಬೇಡ್ಕರ ಕಾಲನಿಯ ಬಳಿಯಿಂದ ಅಂಕೋಲಾ- ಕಾರವಾರ ರಸ್ತೆಗೆ ಹೋಗುತ್ತಿದ್ದೆ . ನೀವು ಹೋಗುತ್ತಿರುವ ರಸ್ತೆ ಡಿವೈಡರ್ ರಸ್ತೆಯಿಂದ ಕೂಡಿರುತ್ತದೆ ಎಂದರೆ ಸರಿ . ಡಿವೈಡರ ರಸ್ತೆಯ ಎರಡು ಬದಿಯಲ್ಲಿ ಪುಟ ಪಾತ ಮಾಡಿರುತ್ತಾರೆ ಎಂದರೆ

ಸರಿ . ರಸ್ತೆಯಲ್ಲಿ ನಡೆದುಕೊಂಡು ಹೋಗುವವರಿಗೆ ರಸ್ತೆಯ ಎರಡು ಬದಿಯಲ್ಲಿ ಪುಟ್ ಪಾತ ವ್ಯವಸೆದ ಮಾಡಿರುತ್ತಾರೆ ಎಂದರೆ ಸರಿ . ಪುಟ ಪಾತ ರಸ್ತೆಯು ಹೈವೆ ರಸ್ತೆಯಿಂದ ಅರ್ಧ ಪುಟ ನಷ್ಟು ಅಡಿಯಷ್ಟು ಎತ್ತರದಲ್ಲಿ ಇರುತ್ತದೆ ಎಂದರೆ ಆ ರೀತಿ ರಸ್ತೆ ಇಲ್ಲ ಅಲ್ಲಿ ಪುಟ ಪಾತ ಇರುವುದಿಲ್ಲ . ಡಿವೈಡರ್ ರಸ್ತೆ ಕಳೆದ ನಂತರ ಎರಡು ರಸ್ತೆಯ ಅಂಚಿನಲ್ಲಿ ಬಿಳಿ ಪಟ್ಟಿಯನ್ನು ಹಾಕಿ ಬಿಟ್ಟಿರುತ್ತಾರೆ . ಕಾರವಾರ ಕ್ಕೆ ಹೋಗುವ ರಸ್ತೆಯು ಡಿವೈಡರ್ ದಿಂದ ಪಶ್ಚಿಮ ದಿಕ್ಕಿಗೆ 18 ರಿಂದ 20 ಅಡಿ ಅಗಲ ಇರಬಹುದು ಎಂದರೆ ಇರಬಹುದು. ನಮ್ಮ ಮನೆಯು ಸದ್ರಿ ರಸ್ತೆಯ ಪೂರ್ವ ದಿಕ್ಕಿನಲ್ಲಿ ಇರುತ್ತದೆ . ನಮ್ಮ ಮನೆಯಿಂದ ಹೋಗಬೇಕಾದರೆ ಡಿವೈಡರ ದಾಟಿ ಕೊಂಡು ಪೂರ್ವ ದಿಕ್ಕಿನ ಕಡೆಗೆ ಹೋಗಬೇಕು ಎಂದರೆ ಸರಿ . ಸದ್ರಿ ಅಪಘಾತವು ಡಿವೈಡರದಿಂದ ಪಶ್ಚಿಮ ದಿಕ್ಕಿನ ಎಷ್ಟು ದೂರದಲ್ಲಿ ಆಗಿರುತ್ತದೆ ಎಂದರೆ ರಸ್ತೆಯ ಅಂಚಿನಲ್ಲಿ ಇರುವ ಬಿಳಿ ಪಟ್ಟಿಯ ಬಳಿಯಲ್ಲಿ ನಾನು ಹೋಗುತ್ತಿದ್ದೆ , ಸದ್ರಿ ವಾಹನವು ನಾನು ಅಲ್ಲಿ ಹೋಗುತ್ತಿರುವಾಗಲೆ ಬಂದು ಡಿಕ್ಕಿ ಪಡಿಸಿರುತ್ತದೆ . ಸದ್ರಿ ಅಪಘಾತವು ನೀವು ಆದಿನ ನಿಮ್ಮ ಮನೆಗೆ ಹೋಗುವ ತರಾತುರಿಯಲ್ಲಿ ರಸ್ತೆಯ ಎಡ ಗಡೆಯಿಂದ ಬಲಬದಿಗೆ ತರಾತುರಿಯಲ್ಲಿ ರಸ್ತೆಯ ಮಧ್ಯ ಭಾಗಕ್ಕೆ ಬಂದಿದ್ದಕ್ಕೆ ಅಪಘಾತವಾಗಿದೆ ಎಂದರೆ ಸರಿಯಲ್ಲ . ಅಪಘಾತವಾದ ತಕ್ಷಣ ನನಗೆ ಎಚ್ಚರ ಇರಲಿಲ್ಲ . ನನಗೆ ಎಚ್ಚರ ವಾದ ತಕ್ಷಣ ನನಗೆ ಗುರುತು ಪರಿಚಯ ಇದ್ದವರು ಒಬ್ಬರು ಬಂದು ಅಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ . ನೀವು ಆ ದಿವಸ ಮನೆಗೆ ಹೋಗಲು ರಸ್ತೆಯ ಬಲಬದಿಗೆ ಬರದೆ ಇದ್ದರೆ ಅಪಘಾತ ವಾಗುತ್ತಿರಲಿಲ್ಲ ಎಂರೆ ಸರಿಯಲ್ಲ . ಸದ್ರಿ ಅಪಘಾತವು ನಿವೇ ರಸ್ತೆಯ ಬಲಬದಿಗೆ ಹೋಗಿದ್ದರಿಂದಲೇ ಆಗಿರುತ್ತದೆ ಎಂರೆ ಸರಿಯಲ್ಲ .

3. ಅಪಘಾತದ ಬಾಬ್ತು ಪಿರ್ಯಾದಿಯನ್ನು ವಸಂತ ಪರಮೇಶ್ವರ ರವರು ಕೊಟ್ಟಿರುತ್ತಾರೆ . ಅಪಘಾತವಾದ ಸ್ವಲ್ಪ ಹೊತ್ತಿನಲ್ಲಿ ನನ್ನ ಅಣ್ಣ ಅಲ್ಲಿಗೆ ಬಂದಿರುತ್ತಾರೆ ಅವರನ್ನು ಯಾರೋ ಫೋನ ಮಾಡಿ

ಅಲ್ಲಿಗೆ ಕರೆಸಿರುತ್ತಾರೆ . ನಿಮಗೆ ಪರಿಹಾರ ಸಿಗಲಿ ಎಂಬ ಕಾರಣದಿಂದ ಪೋಲಿಸರಲ್ಲಿ ಒಂದು ಸುಳ್ಳು ಪಿರ್ಯಾದಿ ದಾಖಲಿಸಲಾಗಿರುತ್ತದೆ ಎಂದರೆ ಸರಿಯಲ್ಲ .

**4**. ನನ್ನನ್ನು ಸರಕಾರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು . ನಂತರ ನನ್ನನ್ನು ಕಾರವಾರ ಸರಕಾರಿ ಅಸ್ಪತ್ರೆಗೆ ದಾಖಲಿಸಲಾಗಿತ್ತು . ಸದ್ರಿ ಕಾರವಾರ ಆಸ್ಪತ್ರೆಯಲ್ಲಿ 14 ದಿವಸ ಒಳ ರೋಗಿಯಾಗಿ ದಾಖಲಾಗಿದ್ದೆ. ಸದ್ರಿ ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಪುನಃ ಒಳರೋಗಿಯಾಗಿ ದಾಖಾಲಾಗಿಲ್ಲ . ಆದರೆ ಚೆಕಅಪ್ ಗಾಗಿ ಹೋಗುತ್ತಿದ್ದೆ . ಸರಕಾರಿ ಆಸ್ಪತ್ರೆಯಲ್ಲಿ ನಿಮಗೆ ಧರ್ಮಾಥ ವಾಗಿ ಚಿಕಿತ್ಸೆಯಾಗಿ ನೀಡಿರುತ್ತಾರೆ ಎಂದರೆ ಹೊರಗಡೆ ಔಷಧಿ ತರಲು ಕೊಟ್ಟಿರುತ್ತಾರೆ. ಈ ಪ್ರಕರಣದಲ್ಲಿ ಹಾಜರು ಪಡಿಸಿದ ದಾಖಲಾತು ಹೊರತು ಪಡಿಸಿ ಬೇರೆ ಯಾವುದೇ ದಾಖಲಾತಿ ಇಲ್ಲ ಎಂದರೆ ಸರಿ . ನಾನು ನಮ್ಮ ವಕೀಲರ ಬಳಿಯಲ್ಲಿ ಕೂಲಿ ಕೆಲಸ ಮಾಡಲು ಅಂದರೆ ಕಾಯಿ ಪಲ್ಲೆ ಮಾರುಕಟೆಟಗೆ ಕೂಲಿ ಕೆಲಸಕ್ಕೆ ಬರುತ್ತಿದ್ದೇನು ಎಂದು ನಮ್ಮ ವಕೀಲರ ಬಳಿ ಹೇಳಿದ್ದೇನೆ . ಈಗಲೂ ಸಹ ನೀವು ಮನೆಯಿಂದ ಕಾಯಿಪಲ್ಲೆ ಮಾರುಕಟ್ಟೆ ಬಂದು ಕೂಲಿ ಕೆಲಸ ಮಾಡುತ್ತಿದ್ದೀರಿ ಎಂದರೆ ಅಪಘಾತವಾದಾಗಿನಿಂದ ಕೆಲಸ ಮಾಡುತ್ತಿಲ್ಲ . ಈಗಲೂ ನಾನು ಜೀವನೋಪಾಯಕ್ಕಾಗಿ ಕೂಲಿ ಕೆಲಸ ಮಾಡಡಿಕೊಂಡು ಬರುತ್ತಿದ್ದೇನೆ ಎಂದರೆ ಬಲ ಗೈಯಲ್ಲಿ ರಾಡ್ ಇರುತ್ತದೆ . ಆದ್ದರಿಂದ ಕೂಲಿ ಕೆಲಸ ಮಾಡಲು ಆಗುವುದಿಲ್ಲ . ಅದನ್ನು ಯಾವಾಗ ತೆಗೆಯಬೇಕು ಎಂದು ಹೇಳಿರುತ್ತಾರೆ ಎಂದರೆ ಅದನ್ನು ತೆಗೆಯಬೇಕು ಎಂದು ಹೇಳಿರುತ್ತಾರೆ . 2 ವರ್ಷದ ಮೇಲೆ ತೆಗೆಯಬೇಕು ಎಂದು ಹೇಳಿರುತ್ತಾರೆ .

**5**. ವೈದ್ಯರ ಬಳಿಯಲ್ಲಿ ಇತ್ತೀಚೆಗೆ 2-3 ತಿಂಗಳ ಹಿಂದೆ ಚಿಕಿತ್ಸೆಗಾಗಿ ಹೋಗಿದ್ದೆ . ಅವರ ಹೆಸರು ನನಗೆ ಗೊತ್ತಿಲ್ಲ . ನನಗೆ ಚಿಕಿತ್ಸೆ ನೀಡಿದ ವೈದ್ಯರು ಅವರೆ ಆಗಿರುತ್ತಾರೆ . ಅಲ್ಲಿ 3-4 ಜನ ವೈದ್ಯರು ಇದ್ದರು ಯಾರು ಎಂದು ಗೊತ್ತಾಗುವುದಿಲ್ಲ . ನನಗೆ ಚಿಕಿತ್ಸೆನೀಡಿದ ವೈದ್ಯರ ಹೆಸರು ವೀರಭದ್ರ ಗೌಡ ಎಂದರೆ

ಇರಬಹುದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ . ನಾನು ನಿತೀನ ಶೆಟ್ಟಿ ರವರ ಬಳಿ ಯಲ್ಲಿ ಚಿಕಿತ್ಸೆ ಯನ್ನು ಪಡೆದುಕೊಂಡಿದ್ದು ಇಲ್ಲ ಎಂದರೆ ಸರಿಯಲ್ಲ . ನೀತಿನ ಶೆಟಿಟ ರವರ ಬಳಿ ಯಲ್ಲಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ಯಾವುದೇ ದಾಖಲಾತಿಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿಲ್ಲ ಎಂದರೆ ನನಗೆ ಗೊತ್ತಾಗುವುದಿಲ್ಲ . ಡಾಃ ನೀತಿನ ಶೆಟ್ಟಿರವರು ನಿಮಗೆ ಯಾವುದೇ ಚಿಕಿತ್ಸೆ ನೀಡಿದ್ದು ಇಲ್ಲ ಎಂದರೆ ಸರಿಯಲ್ಲ . ನನ್ನ ಬಲಗೈ ಮುರಿತಕ್ಕೆ ಒಳಗಾಗಿರುತ್ತದೆ . ನಾನು ವೈದ್ಯರ ಮೇಲೆ ಪ್ರಭಾವ ಬೀರಿ ಅಂಗ ನ್ಯೂನತಾ ಪ್ರಮಾಣ ಪತ್ರ ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ . 2-3 ತಿಂಗಳ ಹಿಂದೆ ಹೋದಾಗ ನನಗೆ X-ray ಮಾಡಿರುತ್ತಾರೆ. ಸದ್ರಿ x ray ಯನ್ನು ಯಾವ ದಿನಾಂಕದಂದು ಮಾಡಿರುತ್ತಾರೆ ಎಂದು ನನಗೆ ನೆನಪಿಲ್ಲ. 3 ತಿಂಗಳ ಹಿಂದೆ ಅಂದರೆ ಜೂನ ತಿಂಗಳಲ್ಲಿ x ray ಮಾಡಿರಬಹುದು. ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಬಲಗೈಯಲ್ಲಿ ರಾಡ್ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.